ಸಹ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯಾವುದೇ ತರಹದ ಅವ್ಯವಹಾರಗಳು ನಡೆದಿರುವಂಥ ಪ್ರಕರಣಗಳ ಬಗ್ಗೆ ವರದಿ ಬಂದಿಲ್ಲ ಎನ್ನುವಂಥ ಮಾಹಿತಿಯನ್ನು ಅಧಿಕಾರಿಗಳು ನನಗೆ ಕೊಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಅಧಿಕಾರಿಗಳ ಮುಖಾಂತರ ತನಿಖೆಯನ್ನು ನಡೆಸುತ್ತೇನೆ.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ 31-07-2002ರ ಲಿಖಿತ ಮೂಲಕ ಉತ್ತರಿಸುವ 93 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ನಾನು ಮಂಡಿಸುತ್ತೇನೆ.

ಅನುಬಂಧ - I

ಅಧ್ಯಕ್ಷರು :- ಮಂಡಿಸಲಾಯಿತು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(1) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, 1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20ನೇ ಪ್ರಕರಣದ ಮೇರೆಗೆ:

1) ದಿನಾಂಕ 15-6-2002ರ ಅಧಿಸೂಚನೆಯನ್ನು ಮಾರ್ಪಡಿಸಿ ಬೆಂಗಳೂರು ನಗರ ಜಿಲ್ಲೆಯಲ್ಲಿ ದಿನಾಂಕ 18-7-2002ರಿಂದ 23-7-2002ರವರೆಗೆ ಆಯ್ದ ಬೇರೆ ಮಂದಿರಗಳಲ್ಲಿ 5ನೇ ಪ್ರದರ್ಶನವನ್ನಾಗಿ ಮಕ್ಕಳ ಚಲನಚಿತ್ರೋತ್ಸವದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಸಹಯೋಗದಿಂದ ಪ್ರದರ್ಶಿಸಲು ಮಕ್ಕಳ ಚಲನಚಿತ್ರ ಸಂಸ್ಥೆ ಸಂತೋಮ ಹೈರೋಡ್, ಚೆನ್ನೈ, ಭಾರತ ಇವರಿಗೆ ಅನುಮತಿ ನೀಡಿ ದಿನಾಂಕ 12-7-2002ರಂದು ಹೊರಡಿಸಲಾದ ಒಸಾಇ:30:ಸಿಎನ್ಎ:2001 ಸಂಖ್ಯೆಯ ಅಧಿಸೂಚನೆ.

2) ಶ್ರೀಮತಿ ಉಷಾರಾವ್ ರವರಿಗೆ ಬೆಂಗಳೂರು ಜಿಲ್ಲೆಯಲ್ಲಿ ದಿನಾಂಕ 25-7-2002 ರಿಂದ 25-8-2002ರವರೆಗೆ ಒಂದು ತಿಂಗಳ ಕಾಲ ಆಯ್ದ ಚಲನಚಿತ್ರ ಮಂದಿರಗಳಲ್ಲಿ "ಹೂ ಮಳೆ" ಚಲನಚಿತ್ರವನ್ನು 5ನೇ ಪ್ರದರ್ಶನವನ್ನಾಗಿ ಬೆಂಗಳೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಸಹಯೋಗದಿಂದ ಪ್ರದರ್ಶಿಸಲು ಮಂಜೂರಾತಿ ನೀಡುವ ಸಂಬಂಧದಲ್ಲಿ ದಿನಾಂಕ 19-7-2002ರಂದು ಹೊರಡಿಸಲಾದ ಒಸಾಇ:14:ಸಿಎನ್ಎ:2002ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

(2) ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗು ವಾರ್ತಾ ಸಚಿವರು: ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಟ್ರಾನ್ಸ್‌ಪೆರನ್ಸಿ ಇನ್‌ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆಕ್ಟ್ 25(2)ರ ಪ್ರಕರಣದ ಮೇರೆಗೆ:

ರಾಯಚೂರಿನ (ಓಪೆಕ್) ಓಪಿಇಸಿ ಅಸಿಸ್ಟೆಡ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್‌ನ ನಾಗರೀಕ ಕಾಮಗಾರಿಗಾಗಿ ಬೇಕಾಗಿರುವ ಉಪಕರಣಗಳ ಪೂರೈಕೆಗೆ ಅಧಿಕಾರವನ್ನು

ನೀಡುವ ಸಂಬಂಧದಲ್ಲಿ ದಿನಾಂಕ 11-6-2002ರಂದು ಹೊರಡಿಸಲಾದ ಹೆಚ್ಎಫ್ಡಬ್ಲ್ಯೂ:64:ಸಿಜಿಎಂ: 2002ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

(3) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಶ್ರೀ ಬಿ.ಕೆ. ಚಂದ್ರೇಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) ಅವರ ಪರವಾಗಿ:- ಮಾನ್ಯ ಅಧ್ಯಕ್ಷರೆ, 1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧನಿಯಮ-1) 145 (4)ರ ಪ್ರಕರಣದ ಮೇರೆಗೆ:

ರಾಜ್ಯ ಶೈಕ್ಷಣಿಕ ಸಲಹಾ ಪರಿಷತ್ತನ್ನು ರಚಿನೆ ಮಾಡಿರುವ ಸಂಬಂಧದಲ್ಲಿ ದಿನಾಂಕ 26-5-2001 ರಂದು ಹೊರಡಿಸಲಾದ ಇಡಿ:34:ವಿವಿಧ:99ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

(4) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಶ್ರೀ ಬಸವರಾಜ್ ಹೆಚ್.ಪಾಟೀಲ್ (ಇಂಧನ ರಾಜ್ಯ ಸಚಿವರು) ಅವರ ಪರವಾಗಿ, 1999ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 57 (3)ರ ಪ್ರಕರಣದ ಮೇರೆಗೆ:

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ ಉದ್ಯಮಗಳು ಮತ್ತು ಅದರ ಸಿಬ್ಬಂದಿಯ ವಿದ್ಯುಚ್ಛಕ್ತಿ ವಿತರಣೆ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು, 2002ನ್ನು ರಚಿಸಿರುವ ಸಂಬಂಧದಲ್ಲಿ ದಿನಾಂಕ 31-5-2002ರಂದು ಹೊರಡಿಸಲಾದ ಡಿಇ:14:ಪಿಎಸ್ಆರ್:2002ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

(5) ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262 (3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ:-

2. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ 2000-2001ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

(6) ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, 1977ರ ಕರ್ನಾಟಕ ಗೃಹ ಮಂಡಳಿ ಕಾಯ್ದೆ 65, 66 (3)ನೇ ಪ್ರಕರಣದ ಮೇರೆಗೆ:-

3. ಕರ್ನಾಟಕ ಗೃಹ ಮಂಡಳಿಯ 1999-2000ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ತಪಾಸಣಾ ವರದಿಯನ್ನು ಮಂಡಿಸುತ್ತೇನೆ.

(7) ಡಾ।। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, 1994ರ ವಿಶ್ವೇಶ್ವರಯ್ಯ ತಾಂತ್ರಿಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 28 (3), ಪ್ರಕರಣದ ಮೇರೆಗೆ:

5. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ 2000-2001ನೇ ಸಾಲಿನ 3ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಶ್ರೀ ವಿ. ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನಾಯಿತು? ಈಗ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು :- ಸ್ವಾಮಿ, ಬೇರೆ ವಿಷಯದ ಬಗ್ಗೆ ಸದನದಲ್ಲಿ ನಡೆಯುತ್ತಿರುವಾಗ ಮಧ್ಯದಲ್ಲಿ ಹೇಳಿದರೆ ಹೇಗೆ? ದಯವಿಟ್ಟು ತಾವು ನನ್ನ ಕಛೇರಿಗೆ ಬನ್ನಿ, ಅದನ್ನು ನಾನು ತರಿಸುತ್ತೇನೆ, ಇಲ್ಲಲ್ಲ. It is not on the floor of the House. ಲ್ಲರೂ ಕೇಳುತ್ತಾರೆ, ಈ 80 ಜನ ಎದ್ದು ನಿಂತುಕೊಳ್ಳುತ್ತಾರೆ, ನನ್ನ ಪ್ರಶ್ನೆ ಏನಾಯಿತು? ನನ್ನ ಕಾಲಿಂಗ್ ಅಟೆನ್‌ಷನ್ ಏನಾಯಿತು? ನನ್ನ ಶೂನ್ಯ ವೇಳೆ ವಿಚಾರ ಏನಾಯಿತು ಎಂದು No. You please come to my chambers, I will definitely see. ನಿಮ್ಮ ಮುಂದೆಯೇ ಫೋನ್ ಮಾಡಿ ಉತ್ತರ ತರಿಸುತ್ತೇನೆ.

4. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ಮಾಜಿ ಸೈನಿಕರು, ರಾಜ್ಯ ಪೋಲೀಸ್ ಇಲಾಖೆಯಲ್ಲಿ ಸೇರ್ಪಡೆಗೊಳ್ಳಲು ಕೇಂದ್ರ ಸರ್ಕಾರವು ನಿಗಧಿಪಡಿಸಿದ ವಯೋಮಿತಿಯನ್ನು ಜಾರಿಗೆ ತರುವ ಬಗ್ಗೆ ಸದನಕ್ಕೆ ಅರ್ಜಿ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :- ಅರ್ಜಿಯನ್ನು ಒಪ್ಪಿಸಲಾಯಿತು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಖಾಸಗೀಕರಣ ಕುರಿತು ನಿಯಮ 69ರ ಮೇರೆಗೆ ಚರ್ಚೆಗೆ ಒತ್ತಾಯ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಗ್ಗೆ 69ನೇ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಕೊಡಲು ತಮ್ಮನ್ನು ಕೇಳಿದ್ದೆ. ತಾವು ನಿನ್ನೆಯ ದಿವಸವೇ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಿರಿ. ತದನಂತರ ಇವೊತ್ತು ಬೆಳಿಗ್ಗೆ ಕೂಡ ತಮಗೆ ತಿಳಿಸಿದ್ದೇನೆ.

ಅಧ್ಯಕ್ಷರು :- ಸ್ವಾಮಿ, ತಾವು ಕೊಟ್ಟಿದ್ದೆ ನಿನ್ನೆ, ಇವೊತ್ತು ಅಜೆಂಡಾದಲ್ಲಿ ಕೊನೆಯಲ್ಲಿ ಹಾಕಿಕೊಂಡಿದ್ದೇನೆ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ಅಜೆಂಡಾದಲ್ಲಿ ಕೊನೆಯಲ್ಲಿ ಹಾಕಿರುವುದರಿಂದ ಇವೊತ್ತು ಚರ್ಚೆ ಆಗುವುದಿಲ್ಲ.

MR. SPEAKER:- If time permits, we will take up to-day alone.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವು ಈ ವಿಚಾರದ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು :- ತಾವು ದಯವಿಟ್ಟು ಕುಳಿತುಕೊಳ್ಳಿ. ಬಂದಿದೆ ಸ್ವಾಮಿ, ಕೊನೆಯಲ್ಲಿ ಹಾಕಿದೆ ನೋಡಿ. ಇವೊತ್ತಿನ ಪ್ರೋಗ್ರಾಂನಲ್ಲಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ಕನಿಷ್ಠ ಪಕ್ಷ ನಮ್ಮ ಮಸೂದೆಗಳನ್ನು ಮಂಡನೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಒಳ್ಳೆಯದು. ಏಕೆಂದರೆ ಇವು ಇಲ್ಲಿ ಪಾಸ್ ಆಗಿ ಮೇಲ್ಮನೆಗೆ ಹೋಗಬೇಕು.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ತಾವು ಮಸೂದೆ ಮಂಡನೆ ಮಾಡಿ, ಬೇಡ ಎಂದು ನಾನು ಹೇಳುವುದಿಲ್ಲ. ನಾನು ಹೇಳುವ ವಿಚಾರ ಬಹಳ ತುರ್ತಾದ ವಿಚಾರವಾಗಿದೆ.

ಅಧ್ಯಕ್ಷರು :- ಇವತ್ತಿನ ಅಜೆಂಡಾವನ್ನು ತಾವು ಓದಿದ್ದೀರಾ? ಅದನ್ನು ಕಡೆಯಲ್ಲಿ ಹಾಕಿದೆ.